## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಿಂದಗಿ

**ಸಿ.ಸಿ.ನಂ.4266/2022**

**ಫಿರ್ಯಾದಿದಾರ :** ಸರ್ಕಾರದ ಪರವಾಗಿ
ಅಬಕಾರಿ ಪೋಲಿಸರು

**ವಿರುದ್ಧ**

**ಆರೋಪಿತರು :** 1. ತಮ್ಮಣ್ಣ ಚಂದ್ರಶೇಖರ ತಳವಾರ
ಸಾಃ ನಿವಾಳಖೇಡ, ತಾಃ ದೇವರ ಹಿಪ್ಪರಗಿ.

\- - -

## ದೋಷಾರೋಪಣೆ

ಶ್ರೀ.ಮಹಾಂತೇಶ ಭೂಸಗೋಳ., ಬಿ.ಎ. (ಲಾ) ಎಲ್ ಎಲ್ ಬಿ., **ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿ, ಸಿಂದಗಿ** ಆದ ನಾನು, ಈ ಮೂಲಕ

1. ತಮ್ಮಣ್ಣ ಚಂದ್ರಶೇಖರ ತಳವಾರ
ಸಾಃ ನಿವಾಳಖೇಡ, ತಾಃ ದೇವರ ಹಿಪ್ಪರಗಿ.

\- - - -

**ಆರೋಪಿತನಾದ ನಿನ್ನ ಮೇಲೆ ಹೊರಿಸಲಾದ ದೋಷಾರೋಪಣೆ ಏನೆಂದರೆ :**

1. ದಿನಾಂಕ 21-09-2021 ರಂದು ಬೆಳಿಗ್ಗೆ 11.45 ಗಂಟೆಗೆ ದೇವರ ಹಿಪ್ಪರಗಿ ಗ್ರಾಮದ ನಿವಾಳಖೇಡ ಗ್ರಾಮದ ಬಸ್ ನಿಲ್ದಾಣದ ಹತ್ತಿರ ಗುರುದತ್ತ ಪಾನಶಾಪದಲ್ಲಿ ಅಕ್ರಮವಾಗಿ ಮದ್ಯ ಮಾರಾಟದ ಮಾಡುತ್ತಿದ್ದಾಗ ಅಬಕಾರಿ ಪೋಲಿಸರು ದಾಳಿ ಮಾಡಿದಾಗ 5.040. ಲೀ ಕಳ್ಳಭಟ್ಟಿ ಮದ್ಯವನ್ನು ಸಾರ್ವಜನಿಕರಿಗೆ ಮಾರಾಟ ಮಾಡಲು ಯಾವುದೇ ಪರವಾನಿಗೆ ಇಲ್ಲದೇ ಸಾಗಾಣಿಕೆ ಮಾಡುತ್ತಿದ್ದು ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 32 ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಎರಡನೇಯದಾಗ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನಿಮಗೆ ಸೇರಿದ ಗುರುದತ್ತ ಪಾನಶಾಪದಲ್ಲಿ ಅಕ್ರಮವಾಗಿ ಮದ್ಯವನ್ನು ಸಾಗಾಣಿಕೆ ಮಾಡುತ್ತಿದ್ದು ಆ ಮೂಲಕ ಕರ್ನಾಟಕ ಅಬಕಾರಿ ಕಾಯ್ದೆ ಕಲಂ 38(ಎ) ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಕೊನೆಯದಾಗ ಮೇಲೆ ಹೇಳಿದ ದಿನಾಂಕ, ಸಮಯ ಹಾಗೂ ಸ್ಥಳದಲ್ಲಿ ನೀನು ನಿನ್ನ ತ್ರಿ ಚಕ್ರ ವಾಹನದ ಮೇಲೆ ಅಕ್ರಮವಾಗಿ ನಶೆ ಪದಾರ್ಥವನ್ನು ಮಾರಾಟ ಮಡುವ ಉದ್ದೇಶದಿಂದ ಸಾಗಾಣಿಕೆ ಮಾಡುತ್ತಿದ್ದು ಸದರಿ ಆ ಪದಾರ್ಥವು ನಶೆ ಹೊಂದುವಂತಹ ಪದಾರ್ಥ ಎಂಬ ಬಗ್ಗೆ ಗೊತ್ತಿದ್ದರು ಸಹ ಹಾಗೆ ಮಾರಾಟ ಹಾಗೂ ಸಾಗಾಟಣೆ ಮಾಡುತ್ತಿದ್ದರಿಂದ ಆ ಮೂಲಕ ಕಲಂ 273 ಐಪಿಸಿ ರಡಿಯಲ್ಲಿ ಶಿಕ್ಷಾರ್ಹವಾದ ಅಪರಾಧವನ್ನು ನನ್ನ ಸಂಜ್ಞೇಯತೆಯಲ್ಲಿ ಎಸಗಿರುವಿರಿ.

ಆದ್ದರಿಂದ ಮೇಲಿನ ಆಪಾದನೆಗಳ ವಿಚಾರಣೆಯು ಈ ನ್ಯಾಯಾಲಯದಿಂದ ನಡೆಯತಕ್ಕದ್ದೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕ : 09-03-2023 ಸಿವಿಲ್ ಜಡ್ಜ ಮತ್ತು ಜೆಎಂಎಫ್‌ಸಿ ನ್ಯಾಯಾಲಯ

ಸಿಂದಗಿ

**ಆಪಾದಿತನ ಹೇಳಿಕೆ**

ಪ್ರಶ್ನೆ 1 ಮೇಲಿನ ಆಪಾದನೆಯ ವಿವರವನ್ನು ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ್ದು ತಿಳಿಯಿತೆ?

ಉತ್ತರಃ

ಪ್ರಶ್ನೆ 2 ಸದರಿ ಮೇಲಿನ ಆಪಾದನೆಗಳನ್ನು ಒಪ್ಪಿಕೊಳ್ಳುವಿರಾ ಅಥವಾ ವಿಚಾರಣೆಗಾಗಿ ಕ್ಲೇಮು ಮಾಡುವಿರೆ?

ಉತ್ತರ :

(ಈ ಮೇಲಿನ ಆರೋಪವನ್ನು ಆರೋಪಿತನಿಗೆ ತೆರೆದ ನ್ಯಾಯಾಲಯದಲ್ಲಿ ಓದಿ, ಹೇಳಿ, ಕೇಳಿ ಉತ್ತರ ಪಡೆದು ಸರಿ ವ ನಿಜ ಎಂದು ಪ್ರಮಾಣೀಕರಿಸುವೆನು).

ಸ್ಥಳಃ ಸಿಂದಗಿ,
ದಿನಾಂಕಃ09-03-2023 ಜೆ. ಎಮ್. ಎಫ್.ಸಿ., ಸಿಂದಗಿ

**ಆಪಾದಿತನ ಸಹಿ**